ನೀಡುತ್ತಿದ್ದರು. ಐದು ನಿಮಿಷದ ನಂತರ ಅವರೆಲ್ಲರೂ ಹೊರಟು ಹೋದರು. ಚಂದ್ರಪ್ಪ ಹಾಗೂ ಸುಂದರಿ ದಂಪತಿಗಳು ಒಂದು ಕಡೆ ತಲೆ ಬಗ್ಗಿಸಿಕೊಂಡು ನಿಂತಿದ್ದರು. ಭರತ ಅವರತ್ತ ಮಂಕು ನೋಟ ಹರಿಸುತ್ತಾ ಮರಕ್ಕೊರಗಿಕೊಂಡು ನಿಂತಿದ್ದ.

'ಪಪ್ಪ....ಏನಾಯ್ತು, ಯಾಕೆ ಎಲ್ಲಾ ಹೀಗಿದೀರಿ?' ಋತು ಬಡಬಡಿಸುತ್ತಾ ಕೇಳಿದಳು. ಬೇಡವೆಂದರೂ ಅವಳಿಗೆ ತಾಯಿ ಹೋದ ದಿನ ತಾನು ಹೀಗೆಯೇ ಕೇಳಿದ್ದು ನೆನಪಾಯಿತು. ಆಗಲೂ ಹೀಗೆಯೇ....ಚಂದ್ರಪ್ಪ, ಸುಂದರಿ ತಲೆತಗ್ಗಿಸಿಕೊಂಡು ನಿಂತಿದ್ದರು.

'ಬಾ ಋತು....ಪಾಪ....ಬಂದವಳೇ ಗಾಬರಿ ಆಗಿಬಿಡ್ಬೇಡ, ಅಂಥದ್ದೇನೂ ನಡೆದಿಲ್ಲ, ಆದ್ರೂ ಅಪರೂಪದ ಶ್ರೀಗಂಧದ ಮರ ನಮ್ಮ ಬಂಗ್ಲೆಯಲ್ಲಿ ಎರಡಿತ್ತಲ್ಲ, ಅದರಲ್ಲಿ ಒಂದು ಮರವನ್ನು ರಾತ್ರಿ ಯಾರೋ ಕತ್ತರಿಸಿಕೊಂಡು ಹೋಗಿದ್ದಾರೆ, ನಿನ್ನೆ ಸಂಬಂಧಿಕರ ಮದುವೆಯಿದೆಯೆಂದ ಚಂದ್ರಪ್ಪ, ಸುಂದರಿ ರಾತ್ರಿ ಬಂಗಲೆಯಲ್ಲಿ ಇರ್ಲಿಲ್ಲ, ಆ ಟೈಮನ್ನು ನೋಡಿಕೊಂಡು ಯಾರೋ ಈ ಕೆಲ್ಸ ಮುಗ್ಸಿದ್ದಾರೆ... ನಮ್ಗೆ ಅದರ ಶಬ್ದವೂ ಗೊತ್ತಾಗ್ಲೇ ಇಲ್ಲ ನೋಡು, ಅದಕ್ಕೆ ಪೊಲೀಸ್ ಕಂಪ್ಲೆಂಟ್ ಕೊಟ್ಟಿದ್ದೆ... ಪೊಲೀಸರು ಅದರ ಬಗ್ಗೆ ವಿಚಾರಿಸೋಕೆ ಬಂದಿದ್ರು...' ಪುರುಷೋತ್ತಮರು ನೊಂದು ನುಡಿದರು.

'ಶ್ರೀಗಂಧದ ಮರದಲ್ಲಿ ಲಕ್ಷ್ಮಿ ನೆಲೆಸಿರ್ತಾಳೆ, ಅಂಥ ಮರವನ್ನೇ ಕತ್ತರಿಸಿಕೊಂಡು ಹೋಗಿದ್ದಾರಂದ್ರೆ....ಈ ಬಂಗ್ಲೆಗೆ ಮುಂದೆ ಯಾವ್ಯಾವ ಗ್ರಹಚಾರ ಕಾದಿದೆಯೋ. ನನ್ನ ಮಾತನ್ನು ಇಲ್ಲಿ ಯಾರು ಕೇಳ್ತಾರೆ, ಅವರವರ ಸುಖವನ್ನು ಮಾತ್ರ ಅವರವರು ನೋಡಿಕೊಳ್ತಾರಷ್ಟೇ...' ಕಲಾವತಿ ನೇರವಾಗಿ ತನ್ನನ್ನು ನೋಡುತ್ತಾ ಹೇಳಿದಾಗ ಋತು ಅದು ತನಗಲ್ಲವೆನ್ನುವಂತೆ ಮೌನವಾದಳು. ಈ ಬಂಗಲೆಯ ಮೌನಮಂಟಪದಲ್ಲಿ ಬಹಳಷ್ಟು ರಹಸ್ಯಗಳು ಹುದುಗಿ ಹೋಗಿದೆಯೆನಿಸಿತು. ಅವನ್ನೆಲ್ಲಾ ಹೊರ ತೆಗೆಯುವವರೆಗೆ ತಾನು ತಾಳ್ಮೆಗೆಡದೆ ಮೌನವಾಗಿರುವುದೇ ಒಳಿತೆನಿಸಿತು.

'ಸುಮ್ನೆ ಮಾತಾಡ್ತಾ ನಿಂತಿರ್ಬೇಡ ಕಲಾವತಿ, ಪಾಪ ಮಕ್ಳು, ಟ್ರಾವೆಲ್ ಮಾಡ್ಕೊಂಡು ಬಂದಿದ್ದಾರೆ, ಬೇಗ ಅಡುಗೆ ಮಾಡಿಬಿಡು...' ಎಂದ ಪುರುಷೋತ್ತಮರು ರಮ್ಯಾಳನ್ನು ಅಕ್ಕರೆಯಿಂದ ಮಾತನಾಡಿಸಿದರು. ಅವಳ ತಂದೆಯ ಬಗ್ಗೆಯೂ ವಿಚಾರಿಸಿದರು.

'ಆಫೀಸ್‌ನಲ್ಲಿ ಕೆಲವು ಫೈಲುಗಳನ್ನು ಅರ್ಜೆಂಟಾಗಿ ನೋಡೋದಿತ್ತು, ಬೆಳಗ್ಗಿನಿಂದ ಇದೇ ರಗಳೆ ರಂಪ ಆಗಿ ಹೋಯ್ತು ಋತು, ನಾನೂ ಊಟ ಮಾಡಿಯೇ ಹೊರಡ್ತೀನಿ, ಹೇಗೂ ನನ್ನ ಜೂನಿಯರ್ ಮ್ಯಾನೇಜ್ ಮಾಡ್ತಾನೆ...' ಎಂದ ಪುರುಷೋತ್ತಮರು ಋತು, ರಮ್ಯಾರೊಂದಿಗೆ ಒಳ ನಡೆದರು. ಸುಂದರಿ ಅವರಿಬ್ಬರ ಲಗೇಜುಗಳನ್ನು ಮಹಡಿಯ ರೂಮಿನಲ್ಲಿರಿಸಿ ಔಟ್‌ಹೌಸ್‌ನತ್ತ ನಡೆದರೆ ಚಂದ್ರಪ್ಪ ಬಂಗಲೆಯ ಗೇಟಿನತ್ತ ಹೆಜ್ಜೆ ಹಾಕಿದ್ದ.

ಮಾತಿಲ್ಲದೆ ಒಳ ನಡೆದ ಕಲಾವತಿ ಮಧ್ಯಾಹ್ನದ ಅಡುಗೆಗೆ ತಯಾರಿ ನಡೆಸಿದ್ದರು. ಮನಸ್ಸು ಬೆಳಗಿನ ಪ್ರಕರಣವನ್ನೇ ಮೆಲುಕು ಹಾಕತೊಡಗಿದಾಗ ಯಾರೋ ತನ್ನನ್ನು ಹಿಂದಿನಿಂದ ಬಳಸಿದ ಹಾಗಾಯಿತು. ಬೆಚ್ಚಿ ಹಿಂದಿರುಗಿ ನೋಡಿದರು.

ಋತು....! ಮೊದಲಿನ ಅದೇ ಪ್ರೀತಿ, ಸಲುಗೆಯಲ್ಲಿ ತಮ್ಮನ್ನು ಆಲಂಗಿಸಿದ್ದಾಳೆ. ಕಂಗಳಲ್ಲಿ ಕಂಬನಿಯ ಒರತೆ.

'ಋತು, ಏನಾದ್ರೂ ಬೇಕಿತ್ತಾ?' ತನ್ನ ಬಿಗುವನ್ನು ಕಳೆದುಕೊಳ್ಳದೆ ಮಾತನಾಡಲು ಯತ್ನಿಸಿದಳು ಕಲಾವತಿ.

'ಚಿಕ್ಕಮ್ಮ, ನಂಗೊತ್ತು, ನಿಂಗೆ ನನ್ನ ಮೇಲೆ ತುಂಬಾ ಬೇಜಾರಿದೆ, ಮೊದಲಿನಿಂದ್ಲೂ ಕೋಟೆ ಬಂಗ್ಲೆಯವರ ಯೋಗಕ್ಷೇಮವೇ ನಿಂಗೆ ಮುಖ್ಯ ಅಂತ ನಂಗೊತ್ತಿಲ್ವಾ ಹೇಳು, ಈ ಎಲ್ಲಾ ವಿಪರೀತಗಳು ನನ್ನ, ಹೇಮಂತನ ಪ್ರೀತಿಯಾದ್ಮೇಲೆ ನಡೀತಾ ಇದೆ ಅಂತ ನಿನಗನ್ನಿಸಿದ್ರೆ ನಾನು ಹೇಮಂತನನ್ನು ಮರೆಯೋಕೆ ಸಿದ್ಧವಾಗಿದ್ದೀನಿ, ನಂಗೆ ನೀನು ತುಂಬಾ ಮುಖ್ಯ ಚಿಕ್ಕಮ್ಮ...' ತಡವರಿಸದೆ ನಿಧಾನವಾಗಿ ಋತು ಹೇಳಿದಾಗ ಕಲಾವತಿ ನಂಬಲಾಗದವಳಂತೆ ಅವಳತ್ತ ನೋಡಿದಳು.

'ನನ್ನ ನಂಬು ಚಿಕ್ಕಮ್ಮ, ನೀನು ಬೇಡಾಂದ್ರೆ ಹೇಮಂತನನ್ನು ಮರ್ತು ಬಿಡ್ತೀನಿ, ಅಷ್ಟೇ ಅಲ್ಲ, ನೀನು ಯಾವ ಹುಡುಗನನ್ನು ತೋರಿಸಿದ್ರೂ ಅವನನ್ನು ಮದ್ವೆಯಾಗ್ತೀನಿ...' ಎಂದ ಋತು ಕಲಾವತಿಯನ್ನು ಗಾಢವಾಗಿ ಆಲಂಗಿಸಿದಳು.

ಕಲಾವತಿಯ ಬಿಗಿದುಕೊಂಡಿದ್ದ ಮುಖ ನಿಧಾನವಾಗಿ ಸಡಿಲವಾಯಿತು. ತನ್ನನ್ನಪ್ಪಿದ ಋತುವಿನ ಹಣೆಯನ್ನು ಮೃದುವಾಗಿ ಚುಂಬಿಸಿದಳು.

'ಸಾರಿ ಋತು, ನಿನ್ನ ಪ್ರೀತಿಯನ್ನು ನಾನು ಹೊಸಕಿ ಹಾಕ್ತೀದೀನಿ ಅಂತ ಅಂದುಕೊಳ್ಬೇಡ, ಯಾವ್ದೇ ಸಂಬಂಧವಾದ್ರೂ ಅದು ಒಳ್ಳೆಯದನ್ನೇ ಮಾಡ್ಬೇಕು, ಆದ್ರೆ ನಿನ್ನ, ಹೇಮಂತನ ಸಂಬಂಧ ಈ ಬಂಗ್ಲೆಗೆ ಆಪತ್ತನ್ನೇ ತರ್ತಿದೆ, ಇವತ್ತೂ ನೋಡಿದ್ಯಲ್ಲಾ, ಇಷ್ಟು ವರ್ಷ ಸುರಕ್ಷಿತವಾಗಿದ್ದ ಶ್ರೀಗಂಧದ ಮರವನ್ನು ಕಳ್ಳರು ಕತ್ತರಿಸಿಕೊಂಡು ಹೋಗಿದ್ದಾರೆ....ನೀನು ಹೇಮಂತನ ಸಹವಾಸವನ್ನು ಬಿಟ್ರೆ ಅವ್ನಿಗಿಂತಾ ಒಳ್ಳೆಯ ಹುಡುಗನನ್ನು ನಾನು ಹುಡುಕ್ತೀನಿ...' ಎಂದರು ಕಲಾವತಿ.

ಅಂತೂ ಬಂಗಲೆಯಲ್ಲಿ ತನ್ನ ನಾಟಕದ ಮೊದಲ ಅಂಕ ಆರಂಭವಾಗಿದೆ ಎಂದುಕೊಂಡಳು ಋತು. ಈ ಬಂಗಲೆ ಮೊದಲು ಹೇಗಿತ್ತೋ ಹಾಗೆ ಸಹಜವಾಗಿರಲು ಬಿಟ್ಟು ಬಿಡಬೇಕು. ಆಗ ಅಪ್ಪಾಜಿ ನಂದಿಯಲ್ಲಿ ಹೇಳಿದಂತೆ ತನ್ನ ಆತ್ಮಶಕ್ತಿಯೇ ತನಗೊಂದು ದಾರಿಯನ್ನು ತೋರಿಸಬಹುದು....ಋತು ಮೊದಲ ಬಾರಿಗೆ ವಿವೇಚನೆಯಿಂದ ಯೋಚಿಸತೊಡಗಿದ್ದಳು.

ಕಲಾವತಿ ಹೊಸಹುರುಪಿನಿಂದ ಒಂದೆರಡು ಗಂಟೆಗಳೊಳಗೆ ರುಚಿಕಟ್ಟಾಗಿ ಅಡುಗೆಯನ್ನು ಸಿದ್ಧಪಡಿಸಿದಳು. ನಗುನಗುತ್ತಾ ಎಲ್ಲರನ್ನೂ ಊಟಕ್ಕೆ ಕೂರಿಸಿ ತಾನೇ ಕೈಯ್ಯಾರೆ ಬಡಿಸಿದಳು ಕಲಾವತಿ. ಎಲ್ಲೋ ಮೂಲೆಯಲ್ಲಿ ತೂಕಡಿಸುತ್ತಿದ್ದ ಭರತನನ್ನೂ ಊಟಕ್ಕೆಳೆದುಕೊಂಡು ಬಂದಳು. ಅವನೂ ಸೇರಿದಷ್ಟು ಊಟ ಮಾಡಿದಾಗ ಎಲ್ಲರಿಗೂ ಸಂತೋಷವಾಯಿತು.

ಹೆಂಡತಿಯಲ್ಲಾದ ಈ ದಿಢೀರ್ ಬದಲಾವಣೆಯಿಂದ ಪುರುಷೋತ್ತಮರು ಆಶ್ಚರ್ಯಗೊಂಡರೆ ರಮ್ಯಾಳತ್ತ ಕೀಟಲೆಯಿಂದ ನೋಡಿ ಮುಸಿ ಮುಸಿ ನಕ್ಕಳು ಋತು. ಹೇಮಂತನನ್ನು ತಾನು ಮರೆಯುವುದೇ?....ಅದು ಕನಸಿನಲ್ಲಿಯೂ ಅಸಾಧ್ಯದ ಮಾತು. ಸದ್ಯಕ್ಕೆ ಚಿಕ್ಕಮ್ಮ ಮೊದಲು ತನ್ನೊಂದಿಗೆ ರಾಜಿಯಾಗಿ ಬಿಡಲಿ....ಉಳಿದ ವಿಷಯವೆಲ್ಲಾ ಆಮೇಲೆ....

ಎಲ್ಲರದೂ ಊಟ ಮುಗಿದು ಹಜಾರದಲ್ಲಿ ವಿಶ್ರಮಿಸಿಕೊಳ್ಳುವಷ್ಟು ಹೊತ್ತಿಗೆ ಹೊರಗೆ ಕಾಲಿಂಗ್‌ಬೆಲ್ ಸದ್ದಾಯಿತು. ಕಲಾವತಿಯೇ ಹೋಗಿ ಬಾಗಿಲು ತೆರೆದಳು. ಹೊರಗೆ ಹೇಮಂತ ನಿಂತಿದ್ದ. ಅವನ ಜೊತೆ ನಾಲ್ಕಾರು ಪೊಲೀಸರು. ಅವರನ್ನೆಲ್ಲಾ ಒಟ್ಟಿಗೆ ನೋಡಿ ಕಲಾವತಿ ಬೆಚ್ಚಿದಳು.

ಹೇಮಂತನ ಮುಖದಲ್ಲಿಂದು ಎಂದಿನ ಮಂದಹಾಸವಿರದೆ ಗಂಭೀರವಾಗಿತ್ತು.

## ಭರತನ ಕೈಗೆ ಕೋಳ

'ಆಂಟಿ, ಸಿಟಿಯನ್ನೇ ಬೆಚ್ಚಿ ಬೀಳಿಸಿದ ಸರಣಿ ಕೊಲೆಗಾರ ನಿಮ್ಮ ಕೋಟೆಬಂಗ್ಲೆಯಲ್ಲೇ ಇದ್ದಾನೆಂದು ಪೊಲೀಸರಿಗೆ ಕನ್ಫರ್ಮ್ ಆಗಿದೆ, ಆ ಕೊಲೆಗಾರನನ್ನು ಅರೆಸ್ಟ್ ಮಾಡೋಕೆ ಇನ್ಸ್‌ಪೆಕ್ಟರ್ ಅಜಯ್ ಕುಲಕರ್ಣಿ ತನ್ನ ಪರಿವಾರದೊಂದಿಗೆ ವಾರೆಂಟ್ ಸಮೇತ ಬಂದಿದ್ದಾರೆ....ಅದಕ್ಕೆ ಅವಕಾಶ ಮಾಡ್ಕೊಡಿ ಪ್ಲೀಸ್..' ಕಲಾವತಿಯನ್ನು ಬಳಸಿಕೊಂಡೇ ಎಲ್ಲರೂ ಒಳಬಂದಾಗ ಆಕೆ ಬೆಚ್ಚಿದಳು. ಸರಣಿ ಕೊಲೆಗಾರ ತಮ್ಮ ಕೋಟೆ ಬಂಗಲೆಯಲ್ಲಿ ಅಡಗಿದ್ದಾನೆಯೇ?....ಯಾರ ಗಮನಕ್ಕೂ ಬರದಂತೆ ಆ ಕೊಲೆಗಾರ ಇಲ್ಲಿ ಅಡಗಿರುವ ಸಾಧ್ಯತೆಯಾದರೂ ಇದೆಯೇ? ಅವಳಿಗೆ ಗೊಂದಲವೆನಿಸಿತು.

ಅಜಯ್ ಕುಲಕರ್ಣಿ ವಿಶ್ರಾಂತಿ ಪಡೆಯುತ್ತಿದ್ದ ಲಾಯರ್ ಪುರುಷೋತ್ತಮರತ್ತ ಸಾಗಿದ....ಕೈ ಕೋಳವನ್ನು ಹಾಕಿ ಬಂಧಿಸಿದ. ಕಲಾವತಿಯೂ ಸೇರಿದಂತೆ ಎಲ್ಲರೂ ಮತ್ತೊಮ್ಮೆ ಆಘಾತಗೊಂಡರು. ಏಕೆಂದರೆ ಅಜಯ್ ಬಂಧಿಸಿದ್ದು ಲಾಯರ್ ಪುರುಷೋತ್ತಮರನ್ನಲ್ಲ, ಆತ ಬಂಧಿಸಿದ್ದು ಅವರ ಪಕ್ಕದಲ್ಲೇ ಮಂಕುನೋಟ ಹರಿಸುತ್ತಾ ಕುಳಿತಿದ್ದ ಭರತನನ್ನು..!

ತನ್ನ ಕಣ್ಮುಂದೆಯೇ ಭರತನಿಗೆ ಕೈ ಕೋಳ ಹಾಕಿದಾಗ ಯಾವಾಗಲೂ ಸಮಾಧಾನಚಿತ್ತದಿಂದಿರುವ ಪುರುಷೋತ್ತಮರ ಮುಖ ಉದ್ವೇಗದಿಂದ ಕೆಂಪಾಯಿತು.

ಇನ್ಸ್‌ಪೆಕ್ಟರ್ ಅಜಯ್ ಕುಲಕರ್ಣಿ, ವಾಟ್ ಆರ್ ಯೂ ಡೂಯಿಂಗ್, ನೀವೇನು ಮಾಡ್ತಿದೀರ ಅನ್ನೋ ಪ್ರಜ್ಞೆಯಾದ್ರೂ ನಿಮಗಿದ್ಯಾ?.. ನಮ್ಮ ಮಗ